ಅ) ಈ ಸ್ಥಳವನ್ನು ತಮಗೆ ಕೊಡಬೇಕೆಂದು ಕೋರಿ ಯಾವ ಯಾವ ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸಿವೆ, ಅರ್ಜಿಗಳನ್ನು ಪುರಸ್ಕರಿಸುವ ಬಗ್ಗೆ ಸರಕಾರ ನಿರ್ಧರಿಸಿದೆಯೆ?

ಆ) ಆ ಪ್ರದೇಶದ ನಿವಾಸಿಗಳ ಅನುಕೂಲಕ್ಕಾಗಿ ಇರುವ ರಸ್ತೆಯನ್ನು ಅಗಲಗೊಳಿಸಲು ಸದರಿ ಜಾಗವನ್ನು ಬಿಟ್ಟುಕೊಡುವ ಬಗ್ಗೆ ಸಾರ್ವಜನಿಕರ ಮನವಿಯ ಬಗ್ಗೆ ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) :

ಅ) ವಿಸ್ತೀರ್ಣ 7.23 ಎಕರೆ

ಖಾಸಗಿಯವರಿಗೆ ಜಮೀನನ್ನು ಕೊಡುವ ಪ್ರಸ್ತಾಪವಿಲ್ಲ.

ಆ) ಈ ಸಂಸ್ಥೆಗಳು ಸ್ಥಳದ ಬಗ್ಗೆ ಕೋರಿಕೆ ಸಲ್ಲಿಸಿವೆ.

ಅ) ಮೆ. ವಿಕಾಸ್ ಕಾಲೇಜ್ ಆಫ್ ಫಿಸಿಯೋಥರಪಿ ಮಂಗಳೂರು

ಆ) ಮೆ. ಮಹಾಬಲೇಶ್ವರ ಪ್ರಮೋಟರ್ಸ್ ಅಂಡ್ ಬಿಲ್ಡರ್ಸ್ ಕಂಪನಿ, ಲಿ, ಮಂಗಳೂರು

ಇ) ಸರ್ಕಾರದ ಸಂಸ್ಥೆಯಾದ ಕರ್ನಾಟಕ ಗೇರು ಅಭಿವೃದ್ಧಿ ನಿಗಮ

ಈ ಸ್ಥಳವನ್ನು ಇತರೆ ಖಾಸಗಿ ಸಂಸ್ಥೆಗಳಿಗೆ ನೀಡುವ ಪ್ರಶ್ನೆ ಇಲ್ಲದಿರುವುದರಿಂದ ಸರ್ಕಾರಕ್ಕೆ ಪ್ರಸ್ತಾವವನ್ನು ಸಲ್ಲಿಸಿರುವುದಿಲ್ಲ.

ರಸ್ತೆಯನ್ನು ಅಗಲಪಡಿಸಲು ಸಾರ್ವಜನಿಕರಿಂದ ಮನವಿ ಬಂದಿರುವುದಿಲ್ಲ. ಆದರೆ ಮಂಗಳೂರು ಜಿಲ್ಲಾಧಿಕಾರಿಗಳು ರಸ್ತೆಯನ್ನು ಅಗಲ ಮಾಡಲು ಕಂಪನಿಯ 30 ಅಡಿ ಅಗಲ ಜಾಗವನ್ನು ರಸ್ತೆಯ ಪಕ್ಕದಲ್ಲಿ ಕೋರಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಪ್ರೌಢ ಶಾಲಾಭಿವೃದ್ಧಿ ಮಂಡಳಿಗಳ ರಚನೆ

388 - ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮಂಡಳಿಗಳನ್ನು ರಚಿಸಬೇಕೆಂಬ ಆದೇಶವು ಜಾರಿಯಲ್ಲಿದೆಯೇ, ಇದ್ದಲ್ಲಿ ಅದನ್ನು ನಿಯಮಗಳಿಗನುಗುಣವಾಗಿ ರಚಿಸಲಾಗುತ್ತಿದೆಯೇ, ನಿಯಮಗಳನ್ನು ಉಲ್ಲಂಘಿಸಿದ ಉದಾಹರಣೆಗಳು ಇವೆಯೇ, ಇದ್ದಲ್ಲಿ ಆ ಕುರಿತು ಸರ್ಕಾರದವರು ಜರುಗಿಸಿದ ಕ್ರಮಗಳೇನು.

ಆ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಒಟ್ಟು ಪ್ರೌಢಶಾಲೆಗಳು ಎಷ್ಟು ಅಲ್ಲಿನ ಎಲ್ಲಾ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು, ರಚಿಸಲ್ಪಟ್ಟ

ಶಾಲಾ ಅಭಿವೃದ್ಧಿ ಸಮಿತಿಗಳಲ್ಲಿ ಸ್ಥಳೀಯ ಶಾಸಕರು ಅಧ್ಯಕ್ಷರಾಗಿ ಇರಬೇಕೆಂಬ ನಿಯಮವು ಪಾಲಿಸಲ್ಪಟ್ಟಿದೆಯೇ. ಇಲ್ಲವಾದಲ್ಲಿ ಕಾರಣಗಳೇನು ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮಂಡಳಿಗಳನ್ನು ರಚಿಸಬೇಕೆಂಬ ಆದೇಶವು ಜಾರಿಯಲ್ಲಿರುತ್ತದೆ. ಮತ್ತು ನಿಯಮಗಳಿಗನುಗುಣವಾಗಿ ರಚಿಸಲು ಸೂಚಿಸಲಾಗಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 6 ಸರ್ಕಾರಿ ಪ್ರೌಢ ಶಾಲೆಗಳಿವೆ. ಉಪನಿರ್ದೇಶಕರು, ಸಂಬಂಧ ಪಟ್ಟ ಶಾಲಾ ಮುಖ್ಯಸ್ಥರುಗಳಿಗೆ ಶಾಲಾಭಿವೃದ್ಧಿ ಸಮಿತಿ ರಚಿಸಿ ಅನುಮೋದನೆ ಪಡೆಯಲು ತಿಳಿಸಿರುತ್ತಾರೆ.

ಮಂಗಳೂರು ತಾಲ್ಲೂಕಿನ ಕಣ್ಣೂರು ಗ್ರಾಮದಲ್ಲಿ ಪ್ರೌಢ ಶಾಲೆಯ ಪ್ರಾರಂಭ.

389 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ತಾಲ್ಲೂಕಿನ ಅಳವೆ. ಪಡೀಲು ಪ್ರದೇಶದಿಂದ ಪ್ರಾರಂಭಿಸಿ ಬಂಟ್ವಾಳ ತಾಲ್ಲೂಕಿನ ತುಂಬೆಯತನಕ ಇರುವ ಗ್ರಾಮಾಂತರ ಪ್ರದೇಶಗಳಲ್ಲಿ ಯಾವುದೇ ಪ್ರೌಢಶಿಕ್ಷಣ ಶಾಲಾ ವ್ಯವಸ್ಥೆಯು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದರ ಅಗತ್ಯತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಪ್ರದೇಶದಲ್ಲಿ ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದ ಕೂಲಿ ಕಾರ್ಮಿಕರು ಜಾಸ್ತಿ ಪ್ರಮಾಣದಲ್ಲಿ ವಾಸಿಸುತ್ತಿದ್ದು ಅವರ ಮಕ್ಕಳಿಗೆ ಪ್ರೌಢ ಶಿಕ್ಷಣವನ್ನು ಒದಗಿಸಲು ಸರ್ಕಾರವು ಕ್ರಮ ಜರುಗಿಸುವುದೇ ?

ಇ) ಈ ಪ್ರದೇಶದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಬಗ್ಗೆ ಸಕಾಲಿಕ ಕ್ರಮವನ್ನು ಸರ್ಕಾರ ಕೈಗೊಳ್ಳುವುದೇ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿರುವುದಿಲ್ಲ.

ಆ) ಈ ಪ್ರದೇಶಗಳಲ್ಲಿ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳು ಬಂದಲ್ಲಿ ಸರ್ಕಾರವು ಪರಿಗಣಿಸುವುದು.

ಇ) ಬೇಡಿಕೆ ಬಂದಲ್ಲಿ ಪರಿಶೀಲಿಸಿ ಆದ್ಯತೆ ಮೇಲೆ ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ತಾಲ್ಲೂಕಿನ ಸೂರಿಂಜೆಯ ಸರಕಾರಿ ಪ್ರೌಢಶಾಲೆಗೆ ಭೂಮಿ ಮಂಜೂರು.

390 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?